# ಹೀಗೊಂದು ಪ್ರಾರ್ಥನೆ

■ ಮೂಲ: **ಲಿಯೊ ಟಾಲ್‌ಸ್ಟಾಯ್**
■ ಕನ್ನಡಕ್ಕೆ: **ರೇಣುಕಾ ನಿಡಗುಂದಿ**
ಚಿತ್ರ: ಸಂತೋಷ್ ಸಸಿಹಿತ್ಲು

ರಷ್ಯಾದಲ್ಲಿ ಮೂವರು ಪುರುಷರು ಬಹಳ ಪ್ರಸಿದ್ಧ ಸಂತರಾದರಂತೆ. ಈಗ ಯಾರೂ ದೇಶದ ಅತ್ಯುನ್ನತ ಪಾದ್ರಿಯ ಬಳಿ ಬರದೇ ಆ ಮೂವರು ಸಂತರ ಬಳಿಗೆ ಹೋಗತೊಡಗಿದ್ದರು. ಅದರಿಂದ ಪಾದ್ರಿಗೆ ಬಹಳ ಕಳವಳವುಂಟಾಯಿತು. ಕ್ರೈಸ್ತ ಧರ್ಮದಲ್ಲಿ ಚರ್ಚ್ ಅವರನ್ನು 'ಸಂತರು' ಎಂದು ಗುರುತಿಸಿದಾಗ ಮಾತ್ರ ಸಂತರಾಗುತ್ತಾರೆ. ಇವರು ಹೇಗೆ ಸಂತರಾಗಲು ಸಾಧ್ಯ? ಅವರ ಹೆಸರುಗಳನ್ನು ಸಹ ಕೇಳಿಲ್ಲ' ಎಂದು ಅವರು ಚಿಂತೆಗೀಡಾದರು.

ಎಂತಹ ಅಸಂಬದ್ಧ! ಒಬ್ಬ ಸಂತನನ್ನು ಚರ್ಚ್, ಸಂಘಟಿತ ಧರ್ಮ, ಪುರೋಹಿತರು ಪ್ರಮಾಣೀಕರಿಸಬೇಕು – ಅದು ಆಂತರಿಕ ಬೆಳವಣಿಗೆಗೆ ಯಾವುದೇ ಸಂಬಂಧವಿಲ್ಲ ಎಂಬಂತೆ; ಅದು ಸರ್ಕಾರವು ನೀಡುವ ಬಿರುದು ಅಥವಾ ವಿಶ್ವವಿದ್ಯಾಲಯವು ನೀಡುವ ಪದವಿ, ಗೌರವ ಪದವಿ ಎಂಬಂತೆ. ಪ್ರಧಾನ ಪಾದ್ರಿಗೆ ನಿಜವಾಗಿಯೂ ಬಹಳ ಕೋಪ ಬಂದಿತ್ತು.

ಆ ಮೂವರು ಸಂತರು ಸರೋವರದ ಆಚೆ ಬದಿಯಲ್ಲಿ ವಾಸಿಸುತ್ತಿದ್ದರಿಂದ ಅವರು ಒಂದು ದೋಣಿಯನ್ನು ತೆಗೆದುಕೊಂಡು ಸರೋವರದ ಆ ಬದಿಗೆ ಹೋದರು. ಆ ಮೂವರು ಸಂತರು ಮರದ ಕೆಳಗೆ ಕುಳಿತಿದ್ದರು. ಮೂವರೂ ನೋಡಲು ತುಂಬಾ ಸರಳ ಜನ, ರೈತರು, ಅವಿದ್ಯಾವಂತರು. ಅವರು ಪ್ರಧಾನ ಪಾದ್ರಿಯ ಪಾದಮುಟ್ಟಿ ನಮಸ್ಕರಿಸುತ್ತಾರೆ. ಪಾದ್ರಿಗೆ ಸಂತೊಷವಾಗುತ್ತದೆ. ಇವರು ಅಪಾಯಕಾರಿ ಜನರಲ್ಲ, ನಾನೇನೋ ದಂಗೆಕೋರರಿರಬಹುದು ಅಂದುಕೊಂಡಿದ್ದೆ. ನಿಮಿಷದಲ್ಲಿ ಇವರನ್ನು ಸರಿಮಾಡ್ತೀನಿ' ಎಂದು ಯೋಚಿಸಿದ ಪಾದ್ರಿ ಗತ್ತಿನಿಂದ ಕೇಳುತ್ತಾರೆ.

'ನೀವು ಹೇಗೆ ಸಂತರಾದಿರಿ?'

ಅವರು ಹೇಳುತ್ತಾರೆ 'ನಮಗೆ ಗೊತ್ತಿಲ್ಲ! ನಾವು ಸಂತರು ಎಂದು ನಮಗೆ ತಿಳಿದಿಲ್ಲ. ಜನರು ನಮ್ಮನ್ನು ಸಂತರು ಎಂದು ಕರೆಯಲು ಪ್ರಾರಂಭಿಸಿದ್ದಾರೆ ಮತ್ತು ನಾವು ಅಲ್ಲ ಎಂದು ಅವರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರೂ ಅವರು ಕೇಳುತ್ತಿಲ್ಲ. ನಾವು ಅಲ್ಲ ಎಂದು ನಾವು ಹೆಚ್ಚು ವಾದಿಸಿದಷ್ಟೂ ಅವರು ನಮ್ಮನ್ನು ಹೆಚ್ಚು ಪೂಜಿಸುತ್ತಾರೆ! ಮತ್ತು ನಾವು ವಾದಿಸುವುದರಲ್ಲಿ ಹೆಚ್ಚು ನಿಪುಣರಲ್ಲ'. ಪಾದ್ರಿಗೆ ತುಂಬಾ ಸಂತೋಷವಾಗುತ್ತದೆ. ಅವರು ಹೇಳಿದರು, 'ನಿಮ್ಮ ಪ್ರಾರ್ಥನೆ ಏನು? ನಿಮಗೆ ಹೇಗೆ ಪ್ರಾರ್ಥಿಸಬೇಕೆಂದು ತಿಳಿದಿದೆಯೇ?' ಅವರು ಒಬ್ಬರನ್ನೊಬ್ಬರು ನೋಡಿಕೊಂಡರು. ಮೊದಲನೆಯವರು ಎರಡನೆಯವರಿಗೆ, ಎರಡನೆಯವರು ಮೂರನೆಯವರಿಗೆ, 'ನೀವು ಹೇಳಿ' 'ನೀವು ಹೇಳಿ ದಯವಿಟ್ಟು' ಎನ್ನತೊಡಗಿದರು. ಪಾದ್ರಿ ಕೇಳಿದರು, 'ನಿಮ್ಮ ಪ್ರಾರ್ಥನೆ ಏನು ಎಂದು ಹೇಳಿ! ನೀವು ನಮ್ಮ ಕರ್ತನ ಪ್ರಾರ್ಥನೆಯನ್ನು ಹೇಳುತ್ತಿದ್ದೀರೋ ಇಲ್ಲವೋ?' ಆಗ ಅವರನ್ನುತ್ತಾರೆ.

'ನಿಜ ಹೇಳಬೇಕೆಂದರೆ, ನಮಗೆ ಯಾವುದೇ ಪ್ರಾರ್ಥನೆ ತಿಳಿದಿಲ್ಲ. ನಾವು ನಮ್ಮದೇ ಆದ ಪ್ರಾರ್ಥನೆಯನ್ನು ಕಂಡುಹಿಡಿದಿದ್ದೇವೆ ಮತ್ತು ಅದನ್ನು ನಿಮ್ಮೆದುರು ಹೇಳಲು ನಮಗೆ ತುಂಬಾ ಮುಜುಗರವಾಗುತ್ತದೆ? ನೀವು ಕೇಳಿದ್ದೀರೆಂದ ಬಳಿಕ ಹೇಳಲೇ ಬೇಕು, ದೇವರು ತ್ರಿಮೂರ್ತಿಗಳು: ತಂದೆ, ಮಗ ಮತ್ತು ಪವಿತ್ರಾತ್ಮ ಎಂದು ನಾವು ಕೇಳಿದ್ದೇವೆ. ನಾವು ಮೂವರು ಮತ್ತು ಅವನು ಕೂಡ ಮೂವರು, ಆದ್ದರಿಂದ ನಾವು ನಮ್ಮದೇ ಆದ ಒಂದು ಸಣ್ಣ ಪ್ರಾರ್ಥನೆಯನ್ನು ಮಾಡಿದ್ದೇವೆ: 'ನೀವು ಮೂವರು, ನಾವು ಮೂವರು: ನಮ್ಮ ಮೇಲೆ ಕರುಣೆಸು!' ಪಾದ್ರಿ ಸಿಟ್ಟಿಗೇಳುತ್ತಾರೆ.

'ಏನು ಅಸಂಬದ್ಧ! ಇದು ಪ್ರಾರ್ಥನೆಯೇ? ಮೂರ್ಖರೇ, ನಾನು ನಿಮಗೆ ಸರಿಯಾದ ಪ್ರಾರ್ಥನೆಯನ್ನು ಕಲಿಸುತ್ತೇನೆ' ಎಂದು ಪಾದ್ರಿ ಅವರಿಗೆ ಕರ್ತನ ಪ್ರಾರ್ಥನೆಯನ್ನು ಹೇಳಿಕೊಡುತ್ತಾರೆ. ಆ ಮೂವರು ಬಡ ಜನರು, 'ದಯವಿಟ್ಟು ಅದನ್ನು ಮತ್ತೊಮ್ಮೆ ಪುನರಾವರ್ತಿಸಿ, ಏಕೆಂದರೆ ನಾವು ಅಶಿಕ್ಷಿತರು, ನಾವು ಮರೆತುಬಿಡಬಹುದು' ಎಂದರು. ಪಾದ್ರಿ ಮತ್ತೊಮ್ಮೆ ಹೇಳಿಕೊಡುತ್ತಾರೆ, ಅವರು ಮತ್ತೆ ಮತ್ತೆ ಮರೆತುಬಿಡುತ್ತೇವೆ ಮೂರು ಮೂರು ಸಲ ಪುನರಾವರ್ತಿಸಲು ಹೇಳುತ್ತಾರೆ.

ಕೊನೆಗೆ ಸಂತೃಪ್ತನಾದ ಪಾದ್ರಿ ತನ್ನ ದೋಣಿ ಹತ್ತಿ ಹಿಂತಿರುಗುತ್ತಾರೆ. ಸರೋವರದ ಮಧ್ಯದಲ್ಲಿಯೇ ಅವರಿಗೆ ಆಶ್ಚರ್ಯವಾಗುತ್ತದೆ. ದೋಣಿ ನಡೆಸುವವನಿಗೂ ಅಚ್ಚರಿಯಾಗುತ್ತದೆ. ಆ ಮೂವರು ಬಡವರು ನೀರಿನ ಮೇಲೆ ಓಡಿ ಬರುತ್ತಿದ್ದರು! ಮತ್ತು ಅವರು, 'ಒಂದು ಕ್ಷಣ ನಿಲ್ಲಿ! ನಾವು ಪ್ರಾರ್ಥನೆಯನ್ನು ಮರೆತಿದ್ದೇವೆ, ದಯವಿಟ್ಟು ಇನ್ನೊಂದು ಬಾರಿ ಹೇಳಿ!' ಎಂದು ಕೂಗುತ್ತಿದ್ದರು.

ಆಗ ಪಾದ್ರಿಗೆ ಅವರ ಪಾದಗಳನ್ನು ಮುಟ್ಟುವ ಸರದಿ ಬಂತು, ಅವರು ಹೇಳುತ್ತಾರೆ 'ನಾನು ನಿಮಗೆ ಹೇಳಿದ್ದನ್ನು ಮರೆತುಬಿಡಿ. ನಿಮ್ಮ ಪ್ರಾರ್ಥನೆ ಕೇಳಲ್ಪಟ್ಟಿದೆ, ನನ್ನ ಪ್ರಾರ್ಥನೆ ಇನ್ನೂ ಕೇಳಲ್ಪಟ್ಟಿಲ್ಲ. ನೀವು ಹೇಗಿದ್ದೀರೋ ಹಾಗೆಯೇ ಮುಂದುವರಿಯಿರಿ. ನಾನು ಹೇಳಿದ್ದೆಲ್ಲ ತಪ್ಪು, ನನ್ನನ್ನು ಕ್ಷಮಿಸಿ!' ಪ್ರಾರ್ಥನೆಯೆಂಬುದು ಸರಳತೆಯ ಸ್ಥಿತಿ. ಅದನ್ನು ಮಾತಿನಿಂದಲ್ಲ, ಮೌನದಿಂದಲೂ ಮಾಡಬಹುದು. ಶುದ್ಧ ಮನಸ್ಸಿನಿಂದ ಮಾಡಿದ ಯಾವುದೇ ಪ್ರಾರ್ಥನೆ ಯಾವ ರೂಪದಲ್ಲೇ ಇರಲಿ ಅದು ಪರಮಾತ್ಮನನ್ನು ತಲುಪುತ್ತದೆ. ■

